ಇಂದು ದಿಃ 22/04/2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ ಟಿ ಜಿ ಎಂ ವಕೀಲರಿಂದಃ

ಸರ್ವೆ ನಂಬರ್ 219 ರಲ್ಲಿ ಒಟ್ಟು ವಿಸ್ತೀರ್ಣ 1 ಎಕರೆ 31 ಗುಂಟೆ ಇದೆ. ಸರ್ವೆ ನಂಬರ್ 219 ರಲ್ಲಿ ಎಷ್ಟು ಪೋಡಾಗಿದೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂಬರ್ 219 ಬಗ್ಗೆ ದಾಖಲೆಗಳಾಗಿ ಆರ್ ಟಿ ಸಿ, 1 ಎಕರೆ 31 ಗುಂಟೆ ನೋಂದಣಿ ಆಗಿರುವ ದಾಖಲೆ ಇತ್ಯಾದಿ ನೀಡಿದ್ದೇನೆ. ಮರಿದೇವಪ್ಪರವರಿಗೆ ದಾವಾ ಆಸ್ತಿ ಮಾತ್ರ ಇತ್ತು ಬೇರೆ ಆಸ್ತಿ ಇರಲಿಲ್ಲ. ಅವರಿಗೆ ಮನೆ ಮತ್ತು ನಿವೇಶನ ಇತ್ತು ಅದನ್ನು ಅವರು ಜೀವಿತ ಕಾಲದಲ್ಲಿ ಮಾರಾಟ ಮಾಡಿದ್ದರು. ಮರಿದೇವಪ್ಪರವರಿಗೆ ವಿಭಾಗದ ಮೂಲಕ ದಾವಾ ಆಸ್ತಿ ಬಂದಿದ್ದು ಉಳಿದಿಬ್ಬರಿಗೆ ಯಾವ ಆಸ್ತಿ ಬಂದಿತ್ತು ಎಂದು ನನಗೆ ಗೊತ್ತಿಲ್ಲ ಅದನ್ನು ಅವರು ಮೊದಲೇ ಮಾರಾಟ ಮಾಡಿದ್ದರು. ಎಷ್ಟು ವರ್ಷಗಳ ಹಿಂದೆ ವಿಭಾಗವಾಗಿದೆ ಎಂದು ನನಗೆ ಗೊತ್ತಿಲ್ಲ. ಆಸ್ತಿ ಜಂಟಿ ಸ್ವಾಧೀನದಲ್ಲಿದ್ದರೂ ಸಹ ನಾನಾಗಲೀ ವಾದಿಯಾಗಲಿ ಕಟ್ಟಿಲ್ಲ. 1 ನೇ ಪ್ರತಿವಾದಿ ದೊರೆಸ್ವಾಮಿ ಕಂದಾಯ ಕಟ್ಟುತ್ತಿದ್ದರು. ಲಿಂಗಪ್ಪ ಮತ್ತು ಮರಿದೇವರ ಹೆಸರಿನಲ್ಲಿ ಜಂಟಿ ಖಾತೆ ಇರಲಿಲ್ಲ. ಮರಿದೇವಪ್ಪ ಶಾಮೀಲಾಗಿ ಖಾತೆಯನ್ನು ಮಾಡಿಕೊಂಡಿದ್ದಾರೆ ಎಂದು ನಾನಾಗಲೀ ನನ್ನ ತಾಯಿಯಾಗಲಿ ಮೇಲ್ಮನವಿ ಸಲ್ಲಿಸಿಲ್ಲ. ಮರಿದೇವಪ್ಪನ ಹೆಸರಿನಲ್ಲಿ ಖಾತೆ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ಮರಿದೇವಪ್ಪನ ಹೆಸರಿಗೆ ಎಂ ಆರ್ 13/92-93 ರಂತೆ ಹೋಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆ ಆಸ್ತಿಯಲ್ಲಿ ನಮಗೆ ಹಕ್ಕಿಲ್ಲದ ಕಾರಣ ನಾನಾಗಲೀ ನನ್ನ ತಾಯಿಯಾಗಲೀ ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ. ಮರಿದೇವಪ್ಪನಿಂದ ಕಾನೂನು ಪ್ರಕಾರ ಖಾತೆಯಾಗಿತ್ತು ಎಂದರೆ ಸುಳ್ಳು. ಆ ವಿಚಾರ ಗೊತ್ತಿದ್ದರೂ ಸಹ ಪ್ರಶ್ನಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ 6 ನೇ ಪ್ರತಿವಾದಿಗೆ ನ್ಯಾಯಬದ್ಧವಾಗಿ ಮಾರಾಟ ಮಾಡಿದ್ದಾರೆ ಎಂದರೆ 2001 ರಲ್ಲಿ ದೊರೆಸ್ವಾಮಿ ಹೆಸರಿನಲ್ಲಿ ಜಮೀನು ಇರಲಿಲ್ಲ ಎಂದು ನುಡಿಯುತ್ತಾರೆ. 2001 ರಲ್ಲಿ ವಿಚಾರ ಗೊತ್ತಿದ್ದರೂ ಸಹ ನಾನು ಪ್ರಶ್ನಿಸಿಲ್ಲ ಎಂದರೆ ನಾನು ಮತ್ತು ನನ್ನ ತಾಯಿ ಹೋಗಿ ಕೇಳಲಾಗಿ ಆ ವಿಚಾರ ತಿಳಿಸದಿದ್ದರಿಂದ ಪ್ರಶ್ನಿಸಿಲ್ಲ ಎಂದು ನುಡಿಯುತ್ತಾರೆ. ಮರಿದೇವರು ಮತ್ತು ಲಿಂಗಪ್ಪ ಜಂಟಿನಯಾಗಿದ್ದರು ಎನ್ನುವ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ನೀಡಿಲ್ಲ. ಲಿಂಗಪ್ಪ ಮತ್ತು ಮರಿದೇವರು ಯಾವಾಗಲೂ ಜಂಟಿಯಾಗಿ ಇರಲಿಲ್ಲ ಆದಕಾರಣ ಆ ಬಗ್ಗೆ ದಾಖಲೆ ಇಲ್ಲ ಎಂದರೆ ಸುಳ್ಳು. 1 ನೇ ಪ್ರತಿವಾದಿ ಹೆಸರಿಗೆ ಖಾತೆಯ ಕುರಿತು ವಕೀಲರ ನೋಟೀಸು ನಾನು ನೀಡಿಲ್ಲ. ಎಲ್ಲ ನಡವಳಿಕೆಗಳು 20-30 ವರ್ಷಗಳ ಹಿಂದೆ ಗೊತ್ತಿದ್ದರೂ ಸಹ ಆಸ್ತಿ ಕಬಳಿಸಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಬಗ್ಗೆ ನನಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಆ ಕಾರಣ ದಾವಾ ಆಸ್ತಿಯಲ್ಲಿ

ನನಗೆ ಭಾಗದ ಹಕ್ಕಿಲ್ಲ ಎಂದರೆ ಸರಿಯಲ್ಲ. ಅವಶ್ಯಕ ಪಕ್ಷಕಾರರನ್ನು ದಾವೆಯಲ್ಲಿ ಸೇರಿಸದ ಕಾರಣ ದಾವೆ ಊರ್ಜಿತವಲ್ಲ ಎಂದರೆ ಸುಳ್ಳು. ದಾವೆಯನ್ನು ನಿರ್ದಿಷ್ಟ ಅವಧಿಯ ಒಳಗೆ ದಾಖಲಿಸದ ಕಾರಣ ದಾವೆ ಊರ್ಜಿತವಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು 6 ನೇ ಪ್ರತಿವಾದಿಯು 3,50,000/- ಕ್ಕೆ ನೋಂದಾವಣಿ ಮೂಲಕ ಖರೀದಿಸಿದ್ದು ಸುಳ್ಳು. ಕ್ರಯದ ಲಾಗಾಯ್ತು 6 ನೇ ಪ್ರತಿವಾದಿಯು ಸ್ವಾಧೀನದಲ್ಲಿದ್ದಾರೆ ಎಂದರೆ ನಂತರ ಇದ್ದಾರೆ ಎನ್ನುತ್ತಾರೆ. ಆಕಾರಣ ಅವರು ಪ್ರಾಮಾಣಿಕ ಖರೀದಿದಾರರು ಎಂದರೆ ಸುಳ್ಳು. ದಾವಾ ಆಸ್ತಿಯ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ದಾವೆಯ ವಿಚಾರವಾಗಿ ನನಗೆ ಏನೂ ತಿಳಿಯದಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗಾಗಲೀ ನನ್ನ ತಾಯಿಗಾಗಲೀ ದಾವಾ ಆಸ್ತಿಯಲ್ಲಿ ಹಕ್ಕಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.